**ಓ ಎಸ್ ನಂಃ 241-2021** **ಪಿ ಡಬ್ಲ್ಯೂ - 2**

**ಸಾಕ್ಷಿಯನ್ನು ದಿನಾಂಕಃ 18.08.2023 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ** ಪ್ರತಿವಾದಿಗಳ ಪರ ಶ್ರೀ ಎನ್ ಎಸ್ ಯು ವಕೀಲರಿಂದ

ನಾನು ಒ ಎಸ್ ನಂ.218/2014 ರಲ್ಲಿ ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿ. ರಾಮನಾಳ ಗ್ರಾಮದಲ್ಲಿರುವ ಡಾಕ್ಟರ ಹೆಬ್ಬಸೂರು ರವರಿಗೆ ಸೇರಿದ ಮಾವಿನ ತೋಟದಲ್ಲಿ ನಾನು ಕೆಲಸ ಮಾಡುತ್ತೇನೆ ಅಂದರೆ ಸರಿ. ನನಗೆ ಸೇರಿದ ಕಮತ ಇಲ್ಲ ಅಂದರೆ ಸರಿಯಲ್ಲ. ನನಗೆ ಎತ್ತುಗಳು ಇಲ್ಲ. ಸಾಕ್ಷಿ ಮುಂದುವರೆದು ಟ್ರಾಕ್ಟರ ಮುಖಾಂತರ ಉಳುಮೆ ಮಾಡಿಸುವುದಾಗಿ ನುಡಿಯುತ್ತಾರೆ. ನನಗೆ ದಾವಾ ಆಸ್ತಿಗಳ ಸ.ನಂ. ಗೊತ್ತಿದೆ. ಸದರಿ ಆಸ್ತಿಗಳ ಚೆಕ್ಕುಬಂದಿ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ನಾನು ಹೂಡಿಲ್ಲ. ದಾವೆಯಲ್ಲಿ ಹಾಜರುಪಡಿಸಿರುವ ಕಾಗದಗಳು ನನಗೆ ಗೊತ್ತಿದೆ. 1 ನೆ ಪ್ರತಿವಾದಿಯು ಮೃತ್ಯುಪತ್ರವನ್ನು ಪ್ರಶ್ನಿಸಿ ಒ ಎಸ್ ನಂ. 66/2019 ರಲ್ಲಿ ದಾವೆ ಹೂಡಿದ್ದಾರೆ ಅಂದರೆ ಸರಿ. ಸದರಿ ದಾವೆ ಚಾಲ್ತಿ ಇದ್ದರೂ ಸಹ ಸದರಿ ದಾವೆಯ ವಿಚಾರವನ್ನು ಮಾನ್ಯ ಜಿಲ್ಲಾ ನ್ಯಾಯಾಲಯದ ಗಮನಕ್ಕೆ ತರದೇ ಮೃತ್ಯುಪತ್ರದ ಬಗ್ಗೆ ಪಿ ಅಂಡ ಎಸ ಸಿ 10/2020 ರಲ್ಲಿ ಆದೇಶ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಮಲ್ಲವ್ವಳನ್ನು ಸದರಿ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿಯು ಸೋಯಾಬಿನ್ ಬೆಳೆಯನ್ನು ಬೆಳೆಯುತ್ತಿದ್ದಾನೆ ಅಂದರೆ ಸರಿಯಲ್ಲ. ಧಾನ್ಯವನ್ನು ಮಾರಾಟ ಮಾಡಿರುವ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾವಾ ಆಸ್ತಿಯಲ್ಲಿ ನಾನು ವ್ಯವಸಾಯ ಮಾಡದೇ ಇರುವ ಕಾರಣಕ್ಕಾಗಿ ಧಾನ್ಯದ ಮಾರಾಟದ ಬಗ್ಗೆ ರಶೀದಿಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕಬ್ಜೆಯಲ್ಲಿ ಇಲ್ಲದೇ ಇರುವ ಕಾರಣಕ್ಕಾಗಿ ದಾವಾ ಆಸ್ತಿಗಳ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ ಅಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲುಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**